# 2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ
# ಕ್ರಿಮಿನಲ್ ಪ್ರಕರಣ ಸಂಖ್ಯೆ - 1761/2022

**ಪಿರ್ಯಾದುದಾರರು -** **ತಾವರೆಕೆರೆ ಪೋಲಿಸ್ ಠಾಣೆ**

**ವಿರುದ್ಧ**

**ಆರೋಪಿಗಳು** - 1.ಶ್ರೀ. ರೇವಣ್ಣ ಬಿನ್ ತಮ್ಮಯ್ಯಪ್ಪ,
ವಯಸ್ಸು 38 ವರ್ಷ,

2. ಶ್ರೀ. ಶಶಿಕಲ ಕೋಂ ರೇವಣ್ಣ
ವಯಸ್ಸು 35 ವರ್ಷ,

3. ಶ್ರೀ.ಶಿವ @ ಶಿವಣ್ಣ ಬಿನ್ ತಮ್ಮಯ್ಯಪ್ಪ
ವಯಸ್ಸು 45 ವರ್ಷ,
ಆರೋಪಿ 1 ರಿಂದ 3 ರವರ
ವಿಳಾಸ ಸುಬ್ಬರಾಯಪ್ಪನಪಾಳ್ಯ,
ತಾವರೆಕೆರೆ ಹೋಬಳಿ,
ಬೆಂಗಳೂರು ದಕ್ಷಿಣ ತಾಲ್ಲೂಕು.

4. ಐಜೋನ್ ಬಿನ್ ಲೇಟ್ ರಾಜಣ್ಣ
ವಯಸ್ಸು 46 ವರ್ಷ,
ವಾಸ ನಂ.597, ಮಸೀದಿ ಹಿಂಬಾಗ,
ಅಂಚೇಪಾಳ್ಯ , ಕುಂಬಳಗೋಡು,
ಬೆಂಗಳೂರು ದಕ್ಷಿಣ ತಾಲ್ಲೂಕು,
ಬೆಂಗಳೂರು.

## ದೋಷಾರೋಪಣೆ

(ಶ್ರೀಮತಿ. ರಂಜಿತ ಜಿ.ಬಿ, 2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮಾಗಡಿ ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆಪಾದನೆ)

**1.** ರೇವಣ್ಣ
2. ಶಶಿಕಲ
3. ಶಿವ @ ಶಿವಣ್ಣ
4. ಐಜೋನ್ ಆದ ನೀವುಗಳು

ದಿನಾಂಕ 27-12-2013 ರಂದು ಮಾನ್ಯ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವ ತಾವರೆಕೆರೆ ಪೋಲೀಸ್ ಠಾಣೆಯ ಸರಹದ್ದು, ಸುಬ್ಬರಾಯಪ್ಪನ

ಪಾಳ್ಯದಲ್ಲಿರುವ ಚಿಕ್ಕೆಲ್ಲೂರು ರಾಂಪುರ 14/ಪಿ1 ರಲ್ಲಿರುವ ನಿವೇಶನಗಳ ಪೈಕಿ ನಿವೇಶನ ಸಂಖ್ಯೆ 6 ನ್ನು ಚಾಸಾ-1 ರವರಿಗೆ ಹಾಗೂ ನಿವೇಶನ ಸಂಖ್ಯೆ 07 ನ್ನು ಚಾಸಾ-2 ರವರಿಗೆ ಆರೋಪಿಗಳಾದ ನೀವುಗಳು ಒಪ್ಪಿಗೆ ಸಾಕ್ಷಿಯನ್ನು ಪಡೆದು ತಾವರೆಕೆರೆ ನೊಂದಾಣಾಧಿಕಾರಿಗಳ ಕಚೇರಿಯಲ್ಲಿ ನಿವೇಶನಳನ್ನು ನೊಂದಣಿ ಮಾಡಿಕೊಟ್ಟಿದ್ದು, ನಂತರದ ದಿನಗಳಲ್ಲಿ ನೀವುಗಳು ಚಾಸಾ-1 ಮತ್ತು 2 ರವರಿಗೆ ಮೋಸ ಮಾಡುವ ಉದ್ದೇಶದಿಂದ ಸಂಚನ್ನು ಮಾಡಿ 3 ನೇ ಆರೋಪಿಯು ಚಿಕ್ಕೆಲ್ಲೂರು ರಾಂಪುರ 14/ಪಿ1 ರಲ್ಲಿನ ನಿವೇಶನ ಸಂಖ್ಯೆ.7 ನ್ನು ಆರೋಪಿ-4 ರವರಿಗೇ ದಿನಾಂಕ 27.07.2018 ರಂದು ನಿವೇಶನ ಸಂಖ್ಯೆ.3 ಎಂದು ಬದಲು ಮಾಡಿ ಮತ್ತು 6 ನೇ ನಂಬರಿನ ನಿವೇಶನವನ್ನು ದಿನಾಂಕ 19.12.2018 ರಂದು ನಿವೇಶನ ಸಂಖ್ಯೆ 4 ಎಂದು ಬದಲು ಮಾಡಿ ಆರೋಪಿ-4 ರವರಿ ಹೆಂಂಡತಿ ಶೀಲಾ ರವರಿಗೆ ಕ್ರಯ ಮಾಡಿಕೊಟ್ಟು ಚಾಸಾ-1 ಮತ್ತು 2 ವರಿಗೆ ಮೋಸ ಮಾಡಿರುವುದು ಕಂಡು ಬಂದಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-420 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಎರಡನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ಆರೋಪಿ -1 ರಿಂದ 3 ರವರು ಆದ ನೀವುಗಳು ಸಾಮಾನ್ಯ ಉದ್ದೇಶದಿಂದ ಸೇರಿ ಚಾಸಾ-1 ಮತ್ತು 2 ರವರು ದಿನಾಂಕ 28.10.2021 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ ತಮ್ಮ ನಿವೇಶನ ಸಂಖ್ಯೆ 6 ಮತ್ತು 7 ರ ಬಳಿಗೆ ಹೋದಾಗ ಅವಾಚ್ಯ ಶಬ್ದಗಳಿಂದ ಬೈದು ಶಾಂತಿಯುತ ಭಂಗವನ್ನುಂಟುಮಾಡಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-504 ಸಹವಾಚಕ 34 ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಕೊನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ಆರೋಪಿ -1 ರಿಂದ 3 ರವರು ಆದ ನೀವುಗಳು ಸಾಮಾನ್ಯ ಉದ್ದೇಶದಿಂದ ಸೇರಿ ಚಾಸಾ-1 ಮತ್ತು 2 ರವರು ದಿನಾಂಕ 28.10.2021

ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ ತಮ್ಮ ನಿವೇಶನ ಸಂಖ್ಯೆ 6 ಮತ್ತು 7 ರ ಬಳಿಗೆ ಹೋದಾಗ ಪ್ರಾಣ ಬೆದರಿಕೆಯನ್ನು ಹಾಕಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-506 ಸಹವಾಚಕ 34 ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

**ಪ್ರಶ್ನೆ-1 ಃ ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ, ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೆ?**

ಆರೋಪಿ-1 ರವರ ಉತ್ತರ ಃ
ಆರೋಪಿ-2 ರವರ ಉತ್ತರ ಃ
ಆರೋಪಿ-3 ರವರ ಉತ್ತರ ಃ
ಆರೋಪಿ-4 ರವರ ಉತ್ತರ ಃ

**ಪ್ರಶ್ನೆ-2 ಃ ನೀವು ನಿಮ್ಮ ತಪ್ಪನ್ನು ಒಪ್ಪುಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಇಚ್ಚಿಸುವಿವರೋ ?**

ಆರೋಪಿ-1 ರವರ ಉತ್ತರ ಃ
ಆರೋಪಿ-2 ರವರ ಉತ್ತರ ಃ
ಆರೋಪಿ-3 ರವರ ಉತ್ತರ ಃ
ಆರೋಪಿ-4 ರವರ ಉತ್ತರ ಃ

**ಈ ಮೇಲ್ಕಂಡ ಆಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವುದಾಗಿ ಈ ಮೂಲಕ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.**

**(ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ ಸರಿ ಇದೆಯೆಂದು ನನ್ನ ಸಮಕ್ಷಮ ದಿನಾಂಕ 26-03-2024 ರಂದು ಸಹಿಯನ್ನು ಮಾಡಿರುತ್ತೇನೆ.)**

**(ರಂಜಿತ ಜಿ.ಬಿ)**
**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಮಾಗಡಿ.**

**ಆರೋಪಿಗಳ ಸಹಿಃ**